VIJAYAKUMAR KANNUR
Digitally signed by VIJAYAKUMAR KANNUR
Date: 2025.09.18 17:46:04 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 16.09.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃವಾದಿ ಪರ ಶ್ರೀಎಸ್.ಸಿ.ಯು. ವಕೀಲರಿಂದ :**

ನಾನು ಈಗ ಶಿಕ್ಷಕ ವೃತ್ತಿಯಿಂದ ನಿವೃತ್ತಿ ಹೊಂದಿರುವೇನು. ದಿನಾಂಕಃ 30.10.1992 ರಂದು ನಾನು ಶಿಕ್ಷಕ ಅಂತ ಕೆಲಸ ನಿರ್ವಹಿಸುತ್ತಿರುವೇನು. ನನ್ನ ತಂದೆಯ ಹೆಸರು ಸಿದ್ದಪ್ಪ ಎಂದರೆ ಸರಿ. ತಾಯಿಯ ಹೆಸರು ಪಾರ್ವತಿ ಎಂದರೆ ಸರಿ. ಸಿದ್ದಪ್ಪನ ಮೊದಲನೇ ಹೆಂಡತಿ ಪಾರ್ವತಿ ಎಂದರೆ ಸರಿ. ಇವರ ವೈವಾಹಿಕ ಜೀವನದಿಂದ ನಾನು, ಪ್ರತಿವಾದಿ 1 ರಿಂದ 3, 5 ಮತ್ತು 6 ರವರು ಜನ್ಮ ತಾಳಿರುವೇವು ಎಂದರೆ ಸರಿ. ಪಾರ್ವತಿ ಮೃತಪಟ್ಟ ನಂತರ ಸಿದ್ದಪ್ಪ ಭಾಗೀರಥಿ ಎಂಬುವವರ ಜೊತೆ ವಿವಾಹ ಮಾಡಿಕೊಂಡಿರುವರು ಎಂದರೆ ಸರಿ. ಇವರ ವೈವಾಹಿಕ ಜೀವನದಿಂದಪ್ರತಿವಾದಿ 7 ಮತ್ತು 8 ರವರು ಜನ್ಮತಾಳಿರುವರು ಎಂದರೆ ಸರಿ. ಭಾಗೀರಥಿ ಮೃತಪಟ್ಟಿರುವರು ಎಂದರೆ ಸರಿ. ಭಾಗೀರಥಿ ಮೃತಪಟ್ಟ ನಂತರ ಸಿದ್ದಪ್ಪ ವಾದಿ 3 ಕಸ್ತೂರಿ ಎಂಬುವವರ ಜೊತೆ ವಿವಾಹ ಮಾಡಿಕೊಂಡಿರುವರು ಎಂದರೆ ಸರಿಯಲ್ಲ. ಇವರ ವೈವಾಹಿಕ ಜೀವನದಿಂದ ವಾದಿ 1 ಮತ್ತು 2 ರವರು ಜನ್ಮತಾಳಿರುವರು ಎಂದರೆ ಸರಿಯಲ್ಲ.

ಈ ದಾವೆ ದಾಖಲು ಮಾಡುವ ಸಮಯದಲ್ಲಿ ವಾದಿ 1 ರವರಿಗೆ 38 ವರ್ಷ ವಾದಿ 2 ರವರಿಗೆ 36 ವರ್ಷಗಳು ಆಗಿದ್ದವು ಎಂದರೆ ಸರಿಯಲ್ಲ. ನನ್ನ ತಂದೆ ಸಿದ್ದಪ್ಪ ದಿನಾಂಕಃ 27.11.2020 ರಂದು ಮೃತಪಟ್ಟಿರುವರು ಎಂದರೆ ಸರಿ. ಸಿದ್ದಪ್ಪ ಮೃತಪಟ್ಟ ನಂತರ ಅವರಿಗೆ ನೇರ ವಾರಸುದಾರರು ವಾದಿಯರು ಎಂದರೆ ಸರಿಯಲ್ಲ. ನಮ್ಮ ಮನೆತನದ ಆಸ್ತಿಯಲ್ಲಿ ವಾಟ್ನಿ ಮಾಡಿಕೊಳ್ಳುವ ಸಮಯದಲ್ಲಿ ವಾದಿಯರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಏಕೆಂದರೆ ಅವರು ನಮ್ಮ ಕುಟುಂಬಕ್ಕೆ ಯಾವುದೇ ರೀತಿಯಿಂದ ಸಂಬಂಧ ಇರುವುದಿಲ್ಲ. ನನಗೂ ಮತ್ತು ನನ್ನ ಉಳಿದ ಸಹೋದರಿಯರಿಗೂ ನನ್ನ ತಂದೆ 2 ನೇ ಹೆಂಡತಿಯಾದ ಭಾಗೀರಥಿ ಮೃತಪಟ್ಟ ನಂತರ ವಾದಿ 3 ರವರ ಜೊತೆ 3 ನೇ ಮದುವೆ ಮಾಡಿಕೊಂಡ ವಿಷಯ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಇವರ ವೈವಾಹಿಕ ಜೀವನದಿಂದ ವಾದಿ 1 ಮತ್ತು 2 ರವರು ಜನ್ಮ ತಾಳಿದ ವಿಷಯ ನನಗೂ ಮತ್ತು ನನ್ನ ಉಳಿದ ಸಹೋದರಿಯರಿಗೂ ಗೊತ್ತಿತ್ತು ಎಂದರೆ ಸರಿಯಲ್ಲ. ವಾದಿಯರು ದಾವಾ ಆಸ್ತಿಯಲ್ಲಿ ತಮಗೆ ಪಾಲು ನೀಡುವಂತೆ ಹೇಳಿ

ಸಾಕಷ್ಟು ಬಾರಿ ಹಿರಿಯರನ್ನು ಕೂಡಿಸಿದ್ದರು ಎಂದರೆ ಸರಿಯಲ್ಲ. 2021 ರ ವರೆಗೂ ಪಾಲು ನೀಡುವುದನ್ನು ಮುಂದೆದೂಡೂತ್ತಾ ಬಂದಿದ್ದು ಕೊನೆಗೆ ನಮ್ಮ ತಂದೆ ಮೃತಪಟ್ಟ ನಂತರ ವಾದಿಯರಿಗೆ ಪಾಲು ನೀಡುವುದಿಲ್ಲವೆಂದು ಹೇಳಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆ ತನ್ನ ಜೀವಿತ ಅವಧಿಯಲ್ಲಿ ಕುಟುಂಬದಆಸ್ತಿಗಳಲ್ಲಿ ವಾದಿಯರಿಗೂ ಪಾಲು ನೀಡುವಂತೆ ಸಾಕಷ್ಟು ಬಾರಿ ಹೇಳಿದ್ದರೂ ಸಹಿತ ನಾವು ಅವರಿಗೆ ಸ್ಪಂದನೆ ಮಾಡಿರುವುದಿಲ್ಲ ಎಂದು ಹೇಳಿರುವುದಿಲ್ಲ. ದಾವಾ ಜಮೀನುಗಳು ವಾಟ್ನಿ ಮಾಡಿಕೊಳ್ಳುವ ಸಮಯದಲ್ಲಿ ನಮ್ಮ ತಂದೆಯ ಹೆಸರಿನಲ್ಲಿ ಇದ್ದವು ಎಂದರೆ ಸರಿ. ಸರ್ವೇ ನಂ. 362/2, ಸರ್ವೇ ನಂ. 39/1 ಇವು ನನ್ನ ತಂದೆಗೆ ಹಿರಿಯರಿಂದ ಬಂದಿರುವಂತಹ ಆಸ್ತಿಗಳು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲವೆಂದು ಉತ್ತರಿಸಿರುವರು. ನನ್ನ ತಂದೆ ಕೃಷಿ ಮತ್ತು ವ್ಯಾಪಾರ ಉದ್ಯೋಗವನ್ನುಮಾಡುತ್ತಿದ್ದರು ಎಂದರೆ ಸರಿ. ಈ ಉದ್ಯೋಗದಿಂದ ನನ್ನ ತಂದೆಗೆ ಬಂದ ಆದಾಯದಿಂದ ಸರ್ವೇ ನಂ. 366/2 ರ ಜಮೀನನ್ನು ಖರೀದಿ ಮಾಡಿರುವರು ಎಂದರೆ ಅದರ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ, ತನ್ನ ತಂದೆಗೆ ಮಾಹಿತಿ ಇರುವುದು ಎಂದು ಉತ್ತರಿಸಿರುವರು.

ಯಾದವಾಡ ಗ್ರಾಮ ಪಂಚಾಯ್ತಿಯ ಆಸ್ತಿ ನಂ.752 ಮತ್ತು 734 ರ ಆಸ್ತಿಗಳೂ ಸಹ ಹಿರಿಯರಿಂದ ಬಂದಿರುವಂತಹ ಆಸ್ತಿಗಳು ಎಂದರೆ ಸಾಕ್ಷಿ ತನಗೆ ಮಾಹಿತಿ ಇರುವುದಿಲ್ಲ ಎಂದು ಉತ್ತರಿಸಿರುವರು. 1984 ರ ವಾಟ್ನಿಯ ಸಮಯದಲ್ಲಿ ಈ 2 ಆಸ್ತಿಗಳನ್ನು ಸೇರಿಸಿರುವುದಿಲ್ಲ ಎಂದು ಸಾಕ್ಷಿ ನುಡಿಯುವುದೇನೆಂದರೆ ಆ ವಾಟ್ನಿಯನ್ನು ನಮ್ಮ ತಂದೆಯೇ ಮಾಡಿಕೊಟ್ಟಿರುವುದರಿಂದ ಈ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ಸಾಕ್ಷಿ ಉತ್ತರಿಸಿರುವರು. ಈ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ನಮ್ಮ ಮನೆತನಗಳಲ್ಲಿ ಯಾವ ಯಾವ ಸಂದರ್ಬಗಳಲ್ಲಿ ಯಾವ ಯಾವ ವ್ಯವಹಾರ ಆಗಿರುವದು ಎಂಬುದರ ಬಗ್ಗೆ ತಮಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲವೆಂದರೆ ಸಾಕ್ಷಿ ನುಡಿಯುವುದೇನೆಂದರೆ ತಮ್ಮ ತಂದೆ ಮಾಡಿಕೊಟ್ಟಿರುವುದರಿಂದ ಮಾಹಿತಿ ಇರುವುದಿಲ್ಲವೆಂದು ಉತ್ತರಿಸಿರುವರು.

ನಮ್ಮ ಮನೆತನದ ಹೆಳವರು ಪ್ರತಿವರ್ಷಕ್ಕೊಮ್ಮೆ ನಮ್ಮ ಮನೆಗೆ ಬಂದು ಹೋಗಿ ಮಾಡುತ್ತಾರೆ ಎಂದರೆ ಸರಿಯಲ್ಲ. ಹೆಳವರು ಮನೆಗೆ ಬೆಟ್ಟಿ ನೀಡಿದಾಗ ಅವರು ಕುಟುಂಬದಲ್ಲಿ ಆಗಿ ಹೋಗಿರುವಂತಹ ಜನನ, ಮರಣ ಮತ್ತು ವಿವಾಹಗಳಿಗೆ

ಸಂಬಂಧಪಟ್ಟಂತೆ ಅವರು ತಮ್ಮ ಪುಸ್ತಕದಲ್ಲಿ ನಮೂದುಮಾಡಿಕೊಂಡು ಹೋಗುತ್ತಾರೆ ಎಂದರೆ ಸಾಕ್ಷಿ ನುಡಿಯುವುದೇನೆಂದರೆ ತಮ್ಮ ಮನೆತನದ ಹೆಳವರು ತಮ್ಮ ಮನೆಗೆ ಬಂದಿರುವುದಿಲ್ಲವೆಂದು ಉತ್ತರಿಸಿರುವರು.

ನನ್ನ ಅಜ್ಜನ ಹೆಸರು ಬಸಪ್ಪ ಎಂದರೆ ಸರಿ. ಇವರಿಗೆ ಒಟ್ಟು 7 ಜನ ಮಕ್ಕಳು ಎಂದರೆ ಸರಿ. ಬಸಲಿಂಗಪ್ಪನ ಹೆಂಡತಿ ಹೆಸರು ಶಿವಕ್ಕ ಎಂದರೆ ಸರಿ. ಅವರಿಗೆ ಶ್ರೀಶೈಲ, ಬಸವರಾಜ, ಶಿವಾನಂದ, ಈಶ್ವರ, ಗಂಗಾಧರ, ರಾಜಶೇಖರ, ದೇವರಾಜ, ರತ್ನ, ಗಂಗವ್ವ, ಮಹೇಶ್ವರಿ, ಲಕ್ಷ್ಮೀಬಾಯಿ ಮತ್ತು ಕಮಲಾಕ್ಷಿ ಎಂದರೆ ಸರಿ. ಶಿವರಾಯಪ್ಪನ ಹೆಂಡತಿ ಹೆಸರು ಮಹಲಿಂಗಯ್ಯ ಎಂದರೆ ಸರಿ. ಇವರಿಗೆ ಅಶೋಕ, ಬಸವರಾಜ, ಕಾಶವ್ವ, ಕಮಲವ್ವ ಹಾಗೂ ಇನ್ನೊಬ್ಬ ಮಗಳು ಇದ್ದಳು ಎಂದರೆ ಸರಿ. ನಂತರ ಇನ್ನೊಬ್ಬ ಸಹೋದರನಾದ ಸಿದ್ದಪ್ಪ ಈತನ ಹೆಂಡತಿ ಹೆಸರು ಪಾರ್ವತಿ ಎಂದರೆ ಸರಿ. ಅವರಿಗೆ ಮಲ್ಲಿಕಾರ್ಜುನ, ಶಂಕರ, ಪ್ರಭು, ಬಸವರಾಜ, ಶಿವಕುಮಾರ ಮತ್ತು ರಾಜೇಂದ್ರ ಎಂಬ ಮಕ್ಕಳು ಎಂದರೆ ಸರಿ. ಈ ರೀತಿ ನಮ್ಮ ಮನೆತನದ ಹೆಳವರು ನಮ್ಮ ಮನೆಗೆ ಬೇಟ್ಟಿ ನೀಡಿ ಅವರ ಪುಸ್ತಕದಲ್ಲಿ ಈ ಸಂಗತಿಗಳನ್ನುನಮುದೂ ಮಾಡಿಕೊಂಡಿರುವ ಸಂಗತಿಗಳನ್ನು ನಿಮಗೆ ತೋರಿಸಿದರೆ ಗೊತ್ತಾಗುತ್ತದಯೇ ಎಂಬ ಪ್ರಶ್ನೇಗೆ ಸಾಕ್ಷಿ ನುಡಿಯುವುದೇನೆಂದರೆ ಅಧಿಕೃತ ಹೆಳವರು ನಮ್ಮ ಮನೆಗೆ ಬಂದಿರುವುದಿಲ್ಲ ಎಂದು ಹೇಳಿರುವರು.

ಅದೇ ರೀತಿ ಹೆಳವರು ಸಿದ್ದಪ್ಪನ ಹೆಂಡತಿಯಾದ ಭಾಗೀರಥಿ ಮೃತಪಟ್ಟ ನಂತರ ಸಿದ್ದಪ್ಪ ಕಸ್ತೂರೆವ್ವ ಎಂಬುವವಳನ್ನುವಿವಾಹ ಮಾಡಿಕೊಂಡಿದ್ದು ಇವರಿಗೆ ವಾದಿ 1 ಮತ್ತು 2 ಜನ್ಮ ತಾಳಿರುವರು ಎಂದೂ ಸಹ ತಮ್ಮ ಪುಸ್ತಕದಲ್ಲಿ ನಮೂದು ಮಾಡಿಕೊಂಡು ಹೋಗಿರುವರು ಎಂದರೆ ಸರಿಯಲ್ಲ. ಅದುಖೊಟ್ಟಿ ದಾಖಲೆಯಾಗಿರುವದು. ಹೆಳವರು ನಮ್ಮ ಮನೆತನದ ಬಗ್ಗೆ ಸಂಪೂರ್ಣ ಮಾಹಿತಿಯನ್ನು ತಮ್ಮ ಪುಸ್ತಕದಲ್ಲಿ ನಮೂದು ಮಾಡಿಕೊಂಡು ಹೋಗಿದ್ದರೂ ಸಹಿತ ಅದುನಿಜವಿರುವುದಿಲ್ಲವೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ವಾದಿ 3 ರವರ ದಾಖಲೆಯಲ್ಲಿ ಅವಳ ಗಂಡನ ಹೆಸರು ಸಿದ್ದಪ್ಪ ಹಾಗೂ ವಾದಿ 1 ಮತ್ತು 2 ರವರ ದಾಖಲೆಗಳಲ್ಲಿ ಬಸಪ್ಪ ಕಲ್ಯಾಣಿ ಅಂತ ದಾಖಲೆ ಇರುವುದು ಎಂದರೆ ಅದು

ನಿಜವಿರುವುದಿಲ್ಲ ಎಂದು ಉತ್ತರಿಸಿರುವರು. ವಾದಿ 1 ರಿಂದ 3 ರವರು ನನ್ನ ತಂದೆಯ ಹೆಸರನ್ನು ದುರುಪಯೋಗಪಡಿಸಿಕೊಂಡಿರುವುದಾಗಿ ಎಂದು ಹೇಳಿ ಅವರ ಹೆಸರಿನಲ್ಲಿ ಖೊಟ್ಟಿಯಾಗಿ ದಾಖಲೆಳನ್ನು ಸೃಷ್ಟಿ ಮಾಡಿಕೊಂಡಿರುವುದಾಗಿ ಎಂದು ಅವರ ವಿರುದ್ದ ನಾನಾಗಲೀ ನನ್ನ ಉಳಿದ ಸಹೋದರಿಯರಾಗಲೀ ಯಾವುದೇ ದೂರನ್ನುದಾಖಲು ಮಾಡಿರುವುದಿಲ್ಲ ಎಂದರೆ ಸರಿ. ಏಕೆಂದರೆ ವಾದಿಯರು ನಮಗೆ ಯಾವುದೇ ರೀತಿಯಿಂದ ಸಂಬಂಧ ಇರದೇ ಇರುವುದರಿಂದ. ನಾನು ಶಾಲೆ ಕಲಿಯುವಾಗ ನಮ್ಮ ಒಟ್ಟು ಕುಟುಂಬದ ಆದಾಯದ ಖರ್ಚು ವೆಚ್ಚಗಳನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಧಾರವಾಡದ ಮುರಗಾಮಠದಲ್ಲಿ ವಿದ್ಯಾಭ್ಯಾಸ ಮಾಡಿರುವೇನು.

1985 ರ ವರೆಗೆ ನನಗೆ ನಮ್ಮ ಕುಟುಂಬದ ಉಳಿದ ಸದಸ್ಯರು ಆರ್ಥಿಕ ಸಹಾಯ ನೀಡಿರುವರು. ಅದರ ನಂತರ ಯಾವುದೇ ಆರ್ಥಿಕ ಸಹಾಯ ನೀಡಿರುವುದಿಲ್ಲ. ನಾನು ಖರೀದಿ ಹಿಡಿದಿರುವ ಆಸ್ತಿಯು ಜಂಟಿ ಕುಟುಂಬದಿಂದ ಬಂದ ಆದಾಯದಿಂದ ಸಂಪಾದನೆ ಮಾಡಿರುವಂತಹ ಆಸ್ತಿಯಾಗಿರುವದು ಎಂದರೆ ಸರಿಯಲ್ಲ. ನಾನು 30.10.1992 ರಂದು ಶಿಕ್ಷಕ ವೃತ್ತಿಗೆ ಸೇರಿರುವೇನು. 2003 ನೇ ಸಾಲೀನಲ್ಲಿ ನನಗೆ ಸುಮಾರು ರೂ.45,000/- ಸಂಬಳ ಇರಬಹುದು. ನನಗೆ ಸಂಬಳ ಇದ್ದ ಬಗ್ಗೆ ಮತ್ತು ಸ್ವಂತ ಆದಾಯ ಇದ್ದ ಬಗ್ಗೆ ಯಾವುದೇ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ. 741/1 ಹಾಗೂ 864/3 ಇವು ಜಂಟಿ ಕುಟುಂಬದ ಆದಾಯದ ಆಸ್ತಿಗಳು ಎಂದರೆ ಸರಿಯಲ್ಲ. ಇವು ನನ್ನ ಸ್ವಯಾರ್ಜಿತ ಆಸ್ತಿಗಳು ಎಂದುಸಾಕ್ಷಿ ಉತ್ತರಿಸಿರುವರು. ಸಿಟಿಎಸ್ ಆಸ್ತಿ ನಂ. 4026 ಇ/3 ಈ ಆಸ್ತಿಯೂ ಸಹ ಜಂಟಿ ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ಇದೂ ಸಹ ನನ್ನ ಸ್ವಯಾರ್ಜಿತ ಆಸ್ತಿ. ಈ ದಾವಾ ಆಸ್ತಿಗಳು ಹಾಗೂ ನನ್ನ ಹೆಸರಿನಲ್ಲಿರುವ ಆಸ್ತಿಗಳೊಂದಿಗೆ ನಾನು ಹಾಗೂ ವಾದಿಯರು ಜಂಟಿ ಕಬ್ಜೆಯಲ್ಲಿದ್ದೇವೆ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿರುವ ದಾಖಲೆಗಳು ನಾನು ಶಿಕ್ಷಕ ಸೇವೆಗೆ ನೇಮಕಗೊಂಡಾಗ ಹಾಜರುಪಡಿಸಿರುವುದಿಲ್ಲ. ಕೇವಲ 2024 ರ ಜುಲೈ ತಿಂಗಳ ಪೇ ಬಿಲ್ ಅನ್ನು ಮಾತ್ರ ಹಾಜರುಪಡಿಸಿರುವೇನು. ನಾನು ಹಾಜರುಪಡಿಸಿರುವ ದಾಖಲೆಗಳು ನಾನು ಸ್ವ ಸಂಪಾದನೆ ಮಾಡಿರುವ ಆಸ್ತಿಗಳಿಗೆ ಸಂಬಂಧಪಟ್ಟಿರುವಂತಹ ಮಾಹಿತಿಯ ದಾಖಲೆಗಳಾಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ವಾದಿ 3 ರವರನ್ನು ವಿವಾಹ ಮಾಡಿಕೊಂಡಿರುವ ವಿಷಯ

ಹಾಗೂ ಇವರ ವೈವಾಹಿಕ ಜೀವನದಿಂದ ವಾದಿ 1 ಮತ್ತು 2 ರವರು ಜನ್ಮ ತಾಳಿರುವ ವಿಷಯ ಗೊತ್ತಿದ್ದರೂ ಸಹಿತ ವಾದಿಯರಿಗೆ ಆಸ್ತಿಯಲ್ಲಿ ಪಾಲು ನೀಡಬಾರದು ಎಂಬ ಕಾರಣಕ್ಕಾಗಿ ನಾನು ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1984 ರಿಂದಲೂ ವಾಟ್ನಿ ಮಾಡಿಕೊಂಡು ನಾವು ಪ್ರತ್ಯೇಕವಾಗಿ ಇರುವುದು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾಟ್ನಿ ಪತ್ರವು ಅಧಿಕೃತವಾಗಿ ನೊಂದಣಿ ಆಗಿರುವುದಿಲ್ಲ ಅದಕ್ಕೆ ವಾದಿಯರು ಪಕ್ಷಗಾರರೂ ಸಹ ಆಗಿರುವುದಿಲ್ಲ ಆದ್ದರಿಂದ ಅದು ವಾದಿಯರಿಗೆ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ 10 ಮತ್ತು ಅವರ ವಕೀಲರನ್ನು ಕೂಗಿಸಲಾಯಿತು. ನ್ಯಾಯಾಲಯದಲ್ಲಿ ಹಾಜರಿರದ ಕಾರಣ ಯಾವುದೇ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ:**

ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಇದೆ

VIJAYAKUMAR KANNUR

Digitally signed by VIJAYAKUMAR KANNUR
Date: 2025.09.18 17:46:12 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ